# ಗೃಹಸ್ಥರಿಗೆ ಸ್ವಾಮಿ ವಿವೇಕಾನಂದರು ತೋರಿದ ಹಾದಿ

**ಎದುರ್ಕಳ ಕೆ. ಶಂಕರನಾರಾಯಣ ಭಟ್**

**ಹಿಂದೂಧರ್ಮಕ್ಕೆ ಸಂಬಂಧಿಸಿದಂತೆ ಹಲವಾರು ಕೃತಿಗಳನ್ನು ರಚಿಸಿರುವ ಶ್ರೀ ಶಂಕರನಾರಾಯಣ ಭಟ್ ಅವರು ಈ ಲೇಖನದಲ್ಲಿ ಗೃಹಸ್ಥಾಶ್ರಮದ ಪ್ರಾಮುಖ್ಯವನ್ನೂ ಅದರ ಆದರ್ಶವನ್ನೂ ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ವಿವರಿಸಿರುವರು.**

**ಸನಾತನ** ಹಿಂದೂಧರ್ಮದಂತೆ ಮಾನವನ ಜೀವಿತ ಯಾತ್ರೆಯಲ್ಲಿನ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ ಗಳೆಂಬ ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮವು ವಿಶೇಷವಾಗಿ ಜನಬಳಕೆ ಹಾಗೂ ಲೋಕಪ್ರೀತಿಯನ್ನು ಪಡೆದಿರುತ್ತದೆ. ವ್ಯಕ್ತಿಯ ಹಾಗೂ ರಾಷ್ಟ್ರದ ಜೀವನಾಭ್ಯುದಯ ಮತ್ತು ಶ್ರೇಯಸ್ಸುಗಳು ಧರ್ಮಾಚರಣೆಯ ಮೇಲೆ ನಿಂತಿವೆ. ಗೃಹಸ್ಥಾಶ್ರಮವು ಧರ್ಮದ ಪಾಲನೆ ಹಾಗೂ ಪೋಷಣೆಯ ಕೇಂದ್ರ ಎಂದು ಹೇಳಬಹುದು. ಹಾಗಾಗಿ ಗೃಹಸ್ಥರ ಮೇಲೆ ಇರುವ ಜವಾಬ್ದಾರಿ ಗುರುತರವಾದುದು. ಯುಗಪುರುಷರು, ಮಹಾತ್ಮರು, ವಿಶೇಷ ಸಾಮರ್ಥ್ಯದ ವ್ಯಕ್ತಿಗಳು ಎಲ್ಲರೂ ಜನ್ಮತಳೆದು ಜಗವ ರಂಗಕ್ಕೆ ಬರುವುದು ಗೃಹಸ್ಥಾಶ್ರಮದ ನೆಲೆಯಿಂದಲೇ. ಆದುದರಿಂದ ಆದರ್ಶವಾದ ಗೃಹಸ್ಥಾಶ್ರಮ ವೆಂದರೆ ಲೋಕಕಲ್ಯಾಣ ಶಕ್ತಿಯ ಉಗಮಸ್ಥಾನ ಎಂದರೆ ತಪ್ಪಾಗಲಾರದು. ಗೃಹಸ್ಥಾಶ್ರಮವು ಗೃಹಸ್ಥರಿಗೆ ಪರಸ್ಪರ ಸಹಕಾರಿ ಯಾಗಿರುವುದಲ್ಲದೆ ಬ್ರಹ್ಮಚಾರಿ, ವಾನಪ್ರಸ್ಥ, ಸಂನ್ಯಾಸಿ ಎಂಬ ಇನ್ನಿತರ ಮೂರು ಆಶ್ರಮದವರಿಗೂ ಬೆಂಬಲಕಾರಿಯಾಗಿರು ತ್ತದೆ. ಹಾಗಾಗಿ ಗೃಹಸ್ಥಾಶ್ರಮವು ಜೀವಿತರಂಗದಲ್ಲಿ ವಿಶೇಷ ವಾದ ಮಹತ್ವ-ಸ್ಥಾನಮಾನಗಳಿಗೆ ಪಾತ್ರವಾಗಿರುತ್ತದೆ. ಇದನ್ನು ಮನುಧರ್ಮಶಾಸ್ತ್ರದಲ್ಲಿ ಹೀಗೆ ಬಣ್ಣಿಸಲಾಗಿದೆ :

ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥೋ ಯತಿಸ್ತಥಾ ।
ಏತೇ ಗೃಹಸ್ಥಪ್ರಭವಾಃ ಚತ್ವಾರಃ ಪೃಥಗಾಶ್ರಮಾಃ ॥

"ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಿ ಈ ನಾಲ್ಕು ಮಂದಿಯೂ ಗೃಹಸ್ಥಾಶ್ರಮದಿಂದಲೇ ಉತ್ಪತ್ತಿಯಾಗಿರು ತ್ತಾರೆ."

ಯಥಾ ವಾಯುಂ ಸಮಾಶ್ರಿತ್ಯ ಸರ್ವೇ ಜೀವಂತಿ ಜಂತವಃ।
ತಥಾ ಗೃಹಸ್ಥಮಾಶ್ರಿತ್ಯ ವರ್ತಂತೇ ಸರ್ವ ಆಶ್ರಮಾಃ ॥

"ಯಾವ ರೀತಿ ವಾಯುವನ್ನು ಆಶ್ರಯಿಸಿ ಎಲ್ಲ ಜೀವಿ ಗಳೂ ಜೀವಿಸುತ್ತಿರುತ್ತವೋ ಹಾಗೆಯೇ ಗೃಹಸ್ಥನನ್ನು ಆಶ್ರಯಿಸಿ ಎಲ್ಲ ಆಶ್ರಮದವರು ಜೀವಿಸುತ್ತಿರುತ್ತಾರೆ."

ಗೃಹಸ್ಥಾಶ್ರಮವು ಗೃಹಸ್ಥನಿಗೆ ಬದುಕಿನ ಮೂಲ ಸೂತ್ರ ಗಳಾದ ಸತ್ಯ, ಧರ್ಮ, ಭಕ್ತಿ, ಧೈರ್ಯ ಇತ್ಯಾದಿ ದಿವ್ಯ ಗುಣ ಶಕ್ತಿಗಳ ಅನುಷ್ಠಾನದ ಬಗ್ಗೆ ಸೂಕ್ತವಾದ ಶಿಕ್ಷಣ ನೀಡಬಲ್ಲ ಮಹತ್ಪೂರ್ಣವಾದ ಒಂದು ಶಿಕ್ಷಣ ಕೇಂದ್ರ ಎನ್ನಬಹುದು. ಮಾನವನ ಬಾಳಿನ ಪಯಣದಲ್ಲಿ ಗೃಹಸ್ಥಾಶ್ರಮವು ಬಹಳ ಪರಿಣಾಮಕಾರಿಯಾದ ಒಂದು ಹಂತವಾಗಿದ್ದು ಅದರ ಮೂಲ ನಿಯಮಗಳನ್ನು ಅನುಸರಿಸಿ ಬಾಳಿದಾಗ ಬದುಕು ಸಾರ್ಥಕ ವಾಗುತ್ತದೆ.

**ಮಾನವನ ಬಾಳಿನ ಪಯಣದಲ್ಲಿ ಗೃಹಸ್ಥಾಶ್ರಮವು ಬಹಳ ಪರಿಣಾಮಕಾರಿಯಾದ ಒಂದು ಹಂತ.**

ಸ್ವಾಮಿ ವಿವೇಕಾನಂದರು ಯತಿರಾಜರಾಗಿದ್ದು ಅವರ ಉಪ ದೇಶಗಳು ಬ್ರಹ್ಮಚಾರಿ ಹಾಗೂ ಸಂನ್ಯಾಸಿಗಳಿಗೆ ಮಾತ್ರ ಎಂಬು ದಾಗಿ ಭಾವಿಸಿದರೆ ತಪ್ಪಾದೀತು. ಹಾಗೆಯೇ ಗೃಹಸ್ಥಾಶ್ರಮವೆಂದರೆ ತನ್ನ ಕುಟುಂಬದವರೊಡನೆ ಬಾಳಿ, ಆಸ್ತಿ, ಹಣ, ಕೀರ್ತಿಗಳಿಗಾಗಿ ಶ್ರಮಿಸಿ ಕೊನೆಗೆ ರಕ್ತದ ಬಲ ಕುಂದಿದಾಗ ಒಮ್ಮೆ ಉಸಿರೆಳೆದು ದೇಹತ್ಯಾಗ ಮಾಡುವುದು ಮತ್ತು ಗೃಹಸ್ಥಾಶ್ರಮ ಎಂದರೆ ಹೊರಬರಲು ಸಾಧ್ಯವಿಲ್ಲದ ಭಯಂಕರ ಕಷ್ಟಗಳ ಕೋಟೆಗೆ ನುಗ್ಗಿದಂತೆಯೇ ಸರಿ ಎಂದು ಭಾವಿಸಿದರೆ ನ್ಯಾಯಸಮ್ಮತ ಆಗಲಾರದು.

ಸಾಮಾನ್ಯವಾಗಿ ಜೀವನದ ನಾಲ್ಕು ಆಶ್ರಮಗಳಲ್ಲಿರುವವರು ತಮ್ಮ ಆಶ್ರಮವೇ ಮೇಲು ಯಾ ಕೀಳು ಎಂದು ಭಾವಿಸುವುದು, ಭೇದಭಾವದಿಂದ ವರ್ತಿಸುವುದು ಅಪರೂಪವೇನಲ್ಲ. ಸ್ವಾಮಿ ವಿವೇಕಾನಂದರು ಈ ಬಗ್ಗೆ ಪ್ರಸ್ತಾಪಿಸುತ್ತಾ "ಪ್ರತಿಯೊಬ್ಬನೂ ಅವನವನ ಸ್ಥಾನದಲ್ಲಿ ಗಣ್ಯನಾಗಿರುತ್ತಾನೆ" ಎಂದು ಹೇಳಿರುತ್ತಾರೆ. ತನ್ನ ಸ್ಥಾನದಲ್ಲಿ ಗಣ್ಯತೆ ಸಾಫಲ್ಯಗಳು ಹೇಗೆ ತುಂಬಿ ಬರುತ್ತವೆ? ಆಯಾಯ ಸ್ಥಾನದಲ್ಲಿ ಅನುಸರಿಸಬೇಕಾದ ನಿಯಮಗಳ ನಿಷ್ಠಾ ಪೂರ್ಣಪಾಲನೆಯಿಂದ ಎನ್ನುವುದು ಅನುಭವಸತ್ಯವಾದ ಸಂಗತಿ ಯಾಗಿದೆ. ಗೃಹಸ್ಥನಾದವನಿಗೆ ನಮ್ಮ ಹಿಂದೂ ಧರ್ಮದ ಶಾಸ್ತ್ರ ಗ್ರಂಥಗಳಲ್ಲಿ ಬೇಕಷ್ಟು ಅರ್ಥಗರ್ಭಿತವೂ ಅನುಷ್ಠಾನ ಯೋಗ್ಯವೂ ಆದ ಜೀವನಸೂತ್ರಗಳ ವಿವರಗಳು ಲಭಿಸುತ್ತವೆ. ಆಧುನಿಕ ಕಾಲದಲ್ಲಿ ಮೂಡಿ ಬಂದ ಆಚಾರ್ಯಪುರುಷರಾದ ಸ್ವಾಮಿ ವಿವೇಕಾನಂದರು ಗೃಹಸ್ಥನಾದವನು ಹೇಗಿರಬೇಕು, ಆತನ ಜೀವನದ ಗುರಿಯೇನು, ಎಂಬುದರ ಕುರಿತಾಗಿ ತಮ್ಮ ದಿವ್ಯ ವಾಣಿಯಲ್ಲಿ ಹೀಗೆ ಬೋಧಿಸಿರುತ್ತಾರೆ:

"ಗೃಹಸ್ಥನಾದವನು ಭಗವದ್ಭಕ್ತನಾಗಿರಬೇಕು. ಭಗವತ್ಸಾಕ್ಷಾತ್ಕಾರವೇ ಅವನ ಜೀವನದ ಗುರಿಯಾಗಿರಬೇಕು. ಹಾಗಿದ್ದರೂ ಅವನು ಎಡೆಬಿಡದೆ ಕೆಲಸ ಮಾಡಬೇಕು. ತನ್ನ ಕರ್ತವ್ಯಗಳೆಲ್ಲವನ್ನೂ ನಿರ್ವಹಿಸಬೇಕು. ತನ್ನ ಕರ್ಮದ ಫಲವೆಲ್ಲವನ್ನೂ ಭಗವಂತನಿಗೆ ಅರ್ಪಿಸಬೇಕು."

ಗೃಹಸ್ಥನು ಹಣ ಸಂಪಾದಿಸಬೇಕೇ? ಬೇಕೆನ್ನುವುದು ಒಕ್ಕೊರಲಿನ ಉತ್ತರ. ಹೇಗೆ ಸಂಪಾದಿಸಬೇಕು ಎನ್ನುವುದಕ್ಕೆ ಸರಿಯಾದ ಉತ್ತರವಾಗಿ ವರ್ತಿಸುವುದರಲ್ಲೇ ಗೃಹಸ್ಥಾಶ್ರಮದ ಸುಖದುಃಖಗಳು—ಸಂಸ್ಕೃತಿ ಜೀವನದ, ಧರ್ಮಾನುಷ್ಠಾನದ ಸಫಲತೆಯ ಗುಟ್ಟು ಅಡಗಿದೆ. ಹಣ ಹಾಗೂ ತನ್ಮೂಲಕದ ಇತರ ಭೌತಿಕ ಸಂಪತ್ತಿನ ಸಂಗ್ರಹಣೆಯನ್ನು ಹೇಗೆ ಮಾಡಿದ್ದಾಯಿತು ಎಂಬುದರಲ್ಲಿ ಅಡಕವಾಗಿರುವ ಧರ್ಮ, ಅಧರ್ಮಗಳೇ ಧನಿಕನ ಯೋಗ್ಯತೆಯ ನಿಷ್ಕರ್ಷಣೆಯ ಪ್ರಥಮ ಸೂತ್ರವಾದರೆ ಸಂಗ್ರಹಿಸಿದ ಸಂಪತ್ತನ್ನು ಹೇಗೆ ವಿನಿಯೋಗಿಸುತ್ತಾನೆ ಎನ್ನುವುದು ದ್ವಿತೀಯ ಸೂತ್ರವಾಗಿರುತ್ತದೆ. ಈ ಎರಡು ಸೂತ್ರಗಳ ಧರ್ಮಸೂಕ್ಷ್ಮವನ್ನು ಅರಿತು ವರ್ತಿಸದೇ ಇರುವುದೇ ಅನೇಕ ಗೃಹಸ್ಥರು ಬಾಳಿನಲ್ಲಿ ಅಪಜಯ, ಅಡ್ಡಿ, ಅಸೌಖ್ಯಗಳನ್ನು ಪಡೆಯಲು ಮುಖ್ಯ ಕಾರಣವಾಗುತ್ತದೆ.



ಆದರ್ಶಪ್ರಾಯ ಸಂನ್ಯಾಸಿಯಾಗುವುದು ಎಷ್ಟು ಕಷ್ಟವೊ ಆದರ್ಶಪ್ರಾಯ ಗೃಹಸ್ಥನಾಗುವುದೂ ಅಷ್ಟೇ ಕಷ್ಟ... ಯಥಾರ್ಥವಾದ ಕರ್ಮಜೀವನ ಯಥಾರ್ಥವಾದ ಸಂನ್ಯಾಸದಷ್ಟೇ ಕಠಿಣ.
—ಸ್ವಾಮಿ ವಿವೇಕಾನಂದ

ಈ ಸಂಬಂಧವಾಗಿ ಸ್ವಾಮಿ ವಿವೇಕಾನಂದರು ತಮ್ಮ ವಿಶ್ವವ್ಯಾಪಿ ಸಂದೇಶವನ್ನು ನೀಡುತ್ತಾ "ಗೃಹಸ್ಥನಾದವನು ಬಹಳ ಉತ್ಸಾಹ ಹಾಗೂ ಪ್ರಯತ್ನದಿಂದ ಹಣವನ್ನು ಸಂಪಾದಿಸಿ ತನ್ಮೂಲಕ ತನ್ನ ಸಂಸಾರವನ್ನು ಸುಖವಾಗಿ ಸಾಗಿಸುತ್ತಾ, ಇತರರಿಗೂ ನೆರವಾಗುತ್ತಾ ಸಾಧ್ಯವಾದಷ್ಟು ಪರೋಪಕಾರಿ ಕೆಲಸವನ್ನು ಮಾಡಬೇಕು. ಧರ್ಮಸಮ್ಮತವಾದ ರೀತಿಯಲ್ಲಿ ಹಣವನ್ನು ಸಂಗ್ರಹಿಸಲು ಯತ್ನಿಸುವುದು ಮತ್ತು ಪರೋಪಕಾರಕ್ಕಾಗಿ ಸತ್ಕಾರ್ಯಗಳಲ್ಲಿ ಅದನ್ನು ವಿನಿಯೋಗಿಸುವುದು ಇವುಗಳು ಗುಹೆಯಲ್ಲಿ ಕುಳಿತು ಆತ್ಮಸಾಕ್ಷಾತ್ಕಾರಕ್ಕಾಗಿ ಪ್ರಾರ್ಥಿಸಿ, ಸಾಧನೆ-ತಪಸ್ಸುಗಳನ್ನು ಆಚರಿಸುವ ಯತಿಯಂತೆಯೇ ಗೃಹಸ್ಥನ ಪಾಲಿಗೆ ಸಹಜವಾದ ಪೂಜೆಯಂತಿವೆ. ಇಷ್ಟನ್ನೂ ಮಾಡಲಾಗದಿದ್ದರೆ ನೀನು ಮನುಷ್ಯನೆಂದು ಹೇಳಿಕೊಳ್ಳುವುದು ಹೇಗೆ? ನೀನಿನ್ನೂ ಗೃಹಸ್ಥನಲ್ಲ—ನಂತರ ಮೋಕ್ಷದ ವಿಚಾರ ನಿನಗೆಲ್ಲಿ ಬರಬೇಕು?" ಎಂಬುದಾಗಿ ಸ್ಪಷ್ಟವಾಗಿ ತಿಳಿಸಿರುತ್ತಾರೆ.

ಗೃಹಸ್ಥನ ಸಂಪತ್ತು ಎಷ್ಟು, ಹೇಗೆ ವಿನಿಯೋಗವಾಗಬೇಕು ಎಂಬುದರ ಬಗ್ಗೆ ಸ್ವಾಮೀಜಿಯವರು ತಮ್ಮ ಆಚಾರ್ಯ ವಾಣಿಯಲ್ಲಿ ಹೇಳುತ್ತಾ "ಗೃಹಸ್ಥನು ತನ್ನ ಉತ್ಪತ್ತಿಯಲ್ಲಿ ನಾಲ್ಕನೇ ಒಂದಂಶವನ್ನು ತನ್ನ ಕುಟುಂಬದ ಪೋಷಣೆಗೂ, ಇನ್ನೊಂದು ಅಂಶವನ್ನು ದಾನ, ಸೇವಾ ಕಾರ್ಯಗಳಿಗೂ ಮತ್ತೊಂದು ಅಂಶವನ್ನು ಸ್ವಂತಹಿತದ ಖರ್ಚಿಗೂ ಉಳಿದೊಂದು ಅಂಶವನ್ನು ಭವಿಷ್ಯದ ಉಳಿತಾಯವೆಂದು ಪರಿಗಣಿಸಿ ಖರ್ಚುಮಾಡಬೇಕಾದುದು ಗೃಹಸ್ಥನ ನಿಯಮ" ಎಂದು ಮಾರ್ಗದರ್ಶನ ನೀಡಿರುತ್ತಾರೆ.

ಗೃಹಸ್ಥಾಶ್ರಮ ರಥದ ಎರಡು ಗಾಲಿಗಳೇ ಸತಿಪತಿಯರು. ಸನಾತನ ಧರ್ಮದಂತೆ ಪತ್ನಿಯು ಪತಿಯ ವಿಲಾಸದ ಸೊತ್ತಲ್ಲ. ಅವಳು ಅರ್ಧಾಂಗಿಯಾಗಿದ್ದು ಸಹಧರ್ಮಿಣಿಯಾಗಿರುತ್ತಾಳೆ. ಜೀವನದಲ್ಲಿ ಒದಗುವ ಎಲ್ಲ ಸುಖದುಃಖಗಳಿಗೆ ಇಬ್ಬರೂ ಸಮಭಾಗಿಗಳಾಗಿರುತ್ತಾರೆ. ಆದ್ದರಿಂದ ಪತಿ-ಪತ್ನಿಯರು ಪರಸ್ಪರ ಜೀವನಸೌಖ್ಯ ಹಾಗೂ ಆತ್ಮ ಸಾಕ್ಷಾತ್ಕಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಬದುಕಿನ ಎಲ್ಲ ಕಾರ್ಯಗಳನ್ನು ನಡೆಸಿಕೊಂಡು ಹೋಗುವುದು ಯಶಸ್ವೀ ಜೀವನದ ಮುಖ್ಯ ಸೂತ್ರವಾಗಿರುತ್ತದೆ.

ಗೃಹಸ್ಥಾಶ್ರಮವು ಇಂದ್ರಿಯಗಳ ಸಂಯೋಗದಿಂದ ಉಂಟಾಗುವ ವಿಷಯಸುಖಗಳನ್ನು ಧರ್ಮಸಮ್ಮತವಾದ ರೀತಿಯಲ್ಲಿ ಅನುಭವಿಸಿ ಇಂದ್ರಿಯಾತೀತ ಹಂತವನ್ನು ಏರಲು ಶಿಕ್ಷಣ ಪಡೆಯಲಿರುವ ಕೇಂದ್ರವಾಗಿದೆ. ಶಿಕ್ಷಣಾರ್ಥಿಯು ಈ ಶಿಕ್ಷಣ ಕೇಂದ್ರದಲ್ಲಿ ಶಿಕ್ಷಣ ಪಡೆದು ಹೊರಬರಬೇಕೇ ವಿನಃ ಶಿಕ್ಷಣ

ಪಡೆಯುವುದರಲ್ಲಿಯೇ ಯಾ ಶಿಕ್ಷಣ ಕೇಂದ್ರದಲ್ಲಿ ಉಳಿಯುವುದರಲ್ಲೇ ಬದುಕಿನ ಪುಸ್ತಕ ಬರೆದು ಮುಗಿಸಿದಂತೆ ಆಗಬಾರದು.

ಗೃಹಸ್ಥಾಶ್ರಮಿಗಳಿಗೆ ಉಪದೇಶವೀಯುತ್ತಾ ಸ್ವಾಮಿ ವಿವೇಕಾನಂದರು "ಪತಿವ್ರತ ಅಥವಾ ಪತ್ನೀವ್ರತ ಧರ್ಮವೇ ಗಂಡಸು ಯಾ ಹೆಂಗಸಿನಲ್ಲಿ ಇರಬೇಕಾದ ಮೊಟ್ಟಮೊದಲ ಸದ್ಗುಣವಾಗಿರುತ್ತದೆ. ವಿಶ್ವದಲ್ಲೆಲ್ಲಾ ಕೆಟ್ಟ ನಡತೆಯ ಪಶುಸ್ವಭಾವದ ಗಂಡಂದಿರು, ಗಂಡಸರು ಇರುವರೆಂದು ನಾವು ಕೇಳುತ್ತೇವೆ. ಆದರೆ ಅಷ್ಟೇ ಪ್ರಮಾಣದಲ್ಲಿ ಕೆಟ್ಟ ನಡತೆಯ, ಕೆಟ್ಟ ಸ್ವಭಾವದ ಹೆಂಗಸರು ಇರುವರೆಂಬುದೂ ಸತ್ಯವಲ್ಲವೇ? ಪರಿಶುದ್ಧತೆ ಮತ್ತು ಪತಿವ್ರತ ಯಾ ಪತ್ನೀವ್ರತ ಧರ್ಮವು ಜಯಿಸಲಾರದ ದುಷ್ಟ ಸ್ವಭಾವವು ಯಾವುದಿದೆ? ಪ್ರತಿಯೊಬ್ಬ ಗಂಡಸೂ ತನ್ನ ಪತ್ನಿಯನ್ನುಳಿದು ಇತರರನ್ನು ತಾಯಿ ಯಾ ಮಗಳು ಯಾ ಸಹೋದರಿಯೆಂದು ಕಾಣಲಿ. ಹಾಗೆಯೇ ಪ್ರತಿಯೊಬ್ಬ ಪತ್ನಿಯೂ ತನ್ನ ಪತಿಯನ್ನುಳಿದು ಇತರ ಗಂಡಸರನ್ನು ತಂದೆ, ಮಗ, ಸಹೋದರ ಎಂದು ಕಾಣಲಿ" ಎಂಬುದಾಗಿ ಹೇಳಿರುವುದು ಗೃಹಸ್ಥರಿಗೆ ನಿಜಕ್ಕೂ ಬಾಳ ಕೈದೀವಿಗೆಯಂತಿವೆ.

> ಪ್ರಪಂಚವು ನನಗಲ್ಲ, ಅದಕ್ಕೆ ನಾನು ಅನಿವಾರ್ಯವಲ್ಲ ಎಂಬ ತತ್ತ್ವವನ್ನರಿತು ಅದರಂತೆ ನಡೆಯುವಿರಾದರೆ ನಿಮಗೆ ಯಾವುದರಿಂದಲೂ ಹಾನಿಯುಂಟಾಗದು.
>
> —ಸ್ವಾಮಿ ವಿವೇಕಾನಂದ

ಗೃಹಸ್ಥನು ಜಗತ್ತಿನಲ್ಲಿ ಹೇಗಿರಬೇಕು? ಈ ವಿಚಾರವಾಗಿ ಹೇಳುತ್ತಾ "ನಿನ್ನ ಮಕ್ಕಳಿಗೆ ನೀನೇನಾದರೂ ಕೊಟ್ಟರೆ ಅದಕ್ಕೆ ಬದಲಾಗಿ ಏನನ್ನಾದರೂ ಕೇಳುವಿಯಾ? ಅವರಿಗಾಗಿ ದುಡಿಯುವುದು ನಿನ್ನ ಕರ್ತವ್ಯವಾಗಿದ್ದು ಅಲ್ಲಿಗದು ಮುಗಿಯುತ್ತದೆ. ಅದರಂತೆಯೇ ನೀನು ಯಾವ ಮನುಷ್ಯನಿಗೇ ಆಗಲಿ, ನಗರಕ್ಕೇ ಆಗಲಿ, ಸಂಸ್ಥಾನಕ್ಕೇ ಆಗಲಿ ಏನು ಸಹಕಾರ-ಸೇವೆ ಮಾಡಿದರೂ ನೀನು ಏನನ್ನೂ ಹಿಂದಕ್ಕೆ ಪ್ರತಿಫಲವಾಗಿ ಆಶಿಸಿ ನಿರೀಕ್ಷಿಸದ ಮನೋವೃತ್ತಿಯವನಾಗು. ಜಗತ್ತಿನಲ್ಲಿ ನಿನ್ನದೆಂದು ನೀನು ಪರಿಗಣಿಸುವುದು ಎಲ್ಲವೂ ನಿಜವಾಗಿ ದೇವರದೆಂದು ನಂಬಿರು" ಎಂಬುದಾಗಿ ಸ್ವಾಮೀಜಿಯವರು ಹೇಳಿ ಗೃಹಸ್ಥರ ಬದುಕಿಗೆ ವಿಶೇಷ ಮಾರ್ಗದರ್ಶನ ಮಾಡಿರುತ್ತಾರೆ.

ಯಾರಲ್ಲೇ ಆಗಲಿ ಹೇಡಿತನ, ಹೆದರಿಕೆಗಳನ್ನು ಸ್ವಾಮೀಜಿಯವರು ಸದಾ ಖಂಡಿಸುತ್ತಿದ್ದರು. ಗೃಹಸ್ಥನಾದವನು ಜಗದ ಜೀವನದಲ್ಲಿ ಹೇಗಿರಬೇಕು? ಈ ಕುರಿತು ಸ್ವಾಮಿ ವಿವೇಕಾನಂದರು ತುಂಬ ಮನಮುಟ್ಟುವ ರೀತಿಯಲ್ಲಿ ಮಾತನಾಡುತ್ತಾ "ತನ್ನ ಶತ್ರುಗಳಿಗೆ ಗೃಹಸ್ಥನು ಮಹಾವೀರನಾಗಿರಬೇಕು. ಶತ್ರುಗಳನ್ನು ಸದಾ ಎದುರಿಸಬೇಕು. ಶತ್ರುಗಳಿಗೆ ಅಂಜಿ ಗೃಹಸ್ಥನು ಮೂಲೆಯಲ್ಲಿ ಕುಳಿತರೆ ತನ್ನ ಕರ್ತವ್ಯವನ್ನು ಮಾಡಿದಂತಾಗಲಿಲ್ಲ. ತನ್ನ ನೆಂಟರು ಮತ್ತು ಇಷ್ಟರಿಗೆ ಗೃಹಸ್ಥನು ಮೃದುಸ್ವಭಾವದ ಕುರಿಮರಿಯಂತೆ ಇರಬೇಕು. ಗೃಹಸ್ಥನಾದವನು ಅಯೋಗ್ಯರಿಗೆ, ಅಧರ್ಮಿಗಳಿಗೆ ಎಂದಿಗೂ ಗೌರವ ತೋರಿಸಬಾರದು" ಎಂಬುದಾಗಿ ಉಪದೇಶಿಸಿರುತ್ತಾರೆ.

ಸ್ವಾಮಿ ವಿವೇಕಾನಂದರು ವೇದಾದಿ ಶಾಸ್ತ್ರಪಾರಂಗತರು. ಮೇಲಾಗಿ ಆತ್ಮಸಾಕ್ಷಾತ್ಕಾರದ ಅನುಭವ ಸಂಪನ್ನರಾದ ಮಹಾಪುರುಷರು. ಹಾಗಾಗಿ ಸ್ವಾಮಿ ವಿವೇಕಾನಂದರು ಅಧಿಕಾರಯುತವಾಗಿ ಉಪದೇಶಿಸುತ್ತಾರೆ. ಅವರ ಉಪದೇಶಗಳಲ್ಲಿ ವೇದ ಸತ್ಯವಿದೆ, ಧರ್ಮಶಕ್ತಿ ಇದೆ, ಅನುಗ್ರಹದ ಬಲವಿದೆ.

ಈ ಇಳೆಯಲ್ಲಿ ಮಾನವನ ಬದುಕಿನ ಅವಧಿ ಬಹಳ ಕಡಿಮೆ. ಮನುಷ್ಯ ಎಷ್ಟು ವರ್ಷ ಬದುಕಿದ ಎಂಬುದು ಮುಖ್ಯವಲ್ಲ. ಎಷ್ಟು ಒಳ್ಳೆಯವನಾಗಿ, ಧರ್ಮಸಮ್ಮತವಾಗಿ ಬದುಕಿದ ಎಂಬುದೇ ಮುಖ್ಯವಾದ ಸಂಗತಿ. ಮನುಷ್ಯನು ಆಯಾಯ ಆಶ್ರಮಧರ್ಮಗಳನ್ನು ಪರಿಪಾಲಿಸಿ ಜೀವನ ಸಾಗಿಸಿದರೆ ತನ್ನ ಸ್ವಂತ ಜೀವನ ಸುಖವಾಗಿ ಪರಮಪುರುಷಾರ್ಥ ಸಾಧನೆಗೆ ಸಹಕಾರಿಯಾಗಿ ಜೊತೆಗೆ ಜಗದ ಹಿತಸಾಧನೆಗೆ ಉಪಕಾರಿಯಾಗಲು ಸಾಧ್ಯವಾಗುತ್ತದೆ. ಭಗವದ್ಭಕ್ತಿ, ಭಗವಂತನಿಗೆ ಶರಣಾಗತಿ ಇವೆರಡನ್ನೂ ಅಳವಡಿಸಿಕೊಂಡು ಬಾಳಿದರೆ ಮಾನವನ ಜೀವನ ಸಾರ್ಥಕವಾಗುತ್ತದೆ. ಸ್ವಾಮಿ ವಿವೇಕಾನಂದರು ಈ ನಿಟ್ಟಿನಲ್ಲಿ ಗೃಹಸ್ಥಾಶ್ರಮಿಗಳಿಗೆ ಹೇಳಿದ ಮಾರ್ಗದರ್ಶಕ ಮಾತುಗಳು ದಿವ್ಯ ಚೈತನ್ಯಗಂಗೆಯ ಬತ್ತದ ಚಿಲುಮೆಯಂತೆ ಇವೆ :

"ಸ್ವಧರ್ಮವನ್ನು ಅನುಸರಿಸಿ ಜೀವನವನ್ನು ಸಾಗಿಸಿರಿ. ಯಾರಿಗೂ ಕೇಡನ್ನು ಬಗೆಯದಿರಿ. ಆದರೆ ಇತರರಿಂದ ಮಾಡಲ್ಪಟ್ಟ ತಪ್ಪಿಗೆ, ಅನ್ಯಾಯಕ್ಕೆ ತಲೆ ತಗ್ಗಿಸಿ ಬಗ್ಗುವುದು ಗೃಹಸ್ಥನಿಗೆ ಪಾಪವಾಗುತ್ತದೆ. ಅನ್ಯಾಯ, ಅಧರ್ಮಗಳನ್ನು ಅಲ್ಲಿಂದಲ್ಲಿಗೆ ಎದುರಿಸಿರಿ. ಹೃದಯದಲ್ಲಿ ದೇವರನ್ನು ಚಿಂತಿಸುತ್ತಾ ಕೈಯಲ್ಲಿ ಕೆಲಸವನ್ನು ಮಾಡುತ್ತಾ ಜೀವನವನ್ನು ಸಾಗಿಸಿರಿ." ✻

> ಪ್ರಪಂಚ ನಮ್ಮ ಅನುಭವಕ್ಕಾಗಿ ಇದೆ. ಆದರೆ ಯಾವುದನ್ನೂ ಬಯಸಬೇಡಿ. ಬಯಕೆಯೆ ದೌರ್ಬಲ್ಯ. ಬಯಕೆಯೆ ನಮ್ಮನ್ನು ಭಿಕ್ಷುಕರನ್ನಾಗಿ ಮಾಡುವುದು. ನಾವು ರಾಜನ ಮಕ್ಕಳು, ಭಿಕ್ಷುಕರಲ್ಲ.... ನಿಮ್ಮ ಆತ್ಮನ ಆಧಾರದ ಮೇಲೆ ನಿಲ್ಲಿ. ಶಾಂತರಾಗಿ. ಆಸೆಯ ಬಂಧನಗಳನ್ನೆಲ್ಲ ತುಂಡರಿಸಿ ಮೇಲೇಳಿ.
>
> – ಸ್ವಾಮಿ ವಿವೇಕಾನಂದ